## ಹೊಸ ಕಾದಂಬರಿ

# ಮಹಾತ್ಮ V/s ಗಾಂಧಿ

### ಮುಂದಿನವಾರ ಆರಂಭ

'ಬಾಪು ಬೆಳಕಿನ ಪುಂಜ, ಜಗತ್ತಿನ ಎಲ್ಲಾ ಸ್ಥೂಲ ವಸ್ತುಗಳಂತೆ ಈ ಬೆಳಕಿನ ಪುಂಜದಿಂದ ಹೊಮ್ಮಿದ ನೆರಳು, ಅವರ ಜ್ಯೇಷ್ಠಪುತ್ರ ಹರಿಲಾಲನ ರೂಪ ಧರಿಸಿತು'. ಗಾಂಧಿ ಅವರ ನಿಕಟವರ್ತಿಗಳಲ್ಲಿ ಒಬ್ಬರಾದ ರಾಜಗೋಪಾಲಾಚಾರಿ ಅವರು ಕಿಶೋರದಾಸ್ ಮಶರೂವಾಲಾ ಅವರಿಗೆ ಬರೆದ ಪತ್ರದಲ್ಲಿನ ಈ ಸಾಲು, ಹರಿಲಾಲನ ದುರಂತಮಯ ಬದುಕು ಮತ್ತು ತಂದೆಯಾಗಿ ಗಾಂಧಿ ಹಾದುಬಂದ ಅಗ್ನಿದಿವ್ಯ ಎರಡನ್ನೂ ಒಟ್ಟೊಟ್ಟಿಗೇ ಬಿಂಬಿಸುವ ಹಾಗಿದೆ. ಹರಿಲಾಲ ಗಾಂಧಿಯ ಬದುಕಿನ ದುರಂತ ಪಯಣವನ್ನು ಪರಿಚಯಿಸುವ ಈ ಕಾದಂಬರಿ ಮೋಹನದಾಸ ಗಾಂಧಿಯ ವ್ಯಕ್ತಿತ್ವದ ಮತ್ತೊಂದು ಮಗ್ಗುಲನ್ನೂ ತೆರೆದಿಡುತ್ತದೆ.



ಗಾಂಧೀಜಿ ಎಂದಿಗೂ ಮಹಾತ್ಮನಾಗಲು ಹಂಬಲಿಸಿದವರಲ್ಲ; ತಮ್ಮನ್ನು ತಾವು ಮಹಾತ್ಮ ಎಂದು ಭಾವಿಸಿಕೊಂಡವರೂ ಅಲ್ಲ. ಜೀವನ ಮತ್ತು ಚಿಂತನೆ ಎರಡನ್ನೂ ಒಂದುಗೂಳಿಸುವ ದಿಸೆಯಲ್ಲಿ ವೈಯಕ್ತಿಕ ಜೀವನ ಮತ್ತು ಸಾರ್ವಜನಿಕ ಬದುಕುಗಳಲ್ಲಿ ನಿರಂತರವಾಗಿ ಸತ್ವಪರೀಕ್ಷೆಯನ್ನು ಎದುರಿಸುತ್ತಲೇ ಬಂದವರು. ಅವರ ಬದುಕೊಂದು ಅಗ್ನಿಕುಂಡ. ಆ ಕುಂಡದಿಂದ, ಉರಿಯ ತಾಳಲಾಗದೆ ಸಿಡಿದುಹೋದ ಒಂದು ಕಟ್ಟಿಗೆಯಂತೆ ಅವರ ಹಿರಿಯ ಮಗ ಹರಿಲಾಲ ಭಾಸವಾಗುತ್ತಾನೆ.

'ಮಹಾತ್ಮ'ನ ಪ್ರಭೆಯನ್ನು ಸರಿಸಿಟ್ಟು, ಮನುಷ್ಯನಾಗಿ ಗಾಂಧೀಜಿಯನ್ನು ನೋಡುವುದು, ಅರ್ಥಮಾಡಿಕೊಳ್ಳುವುದು ಇಂದಿನ ಕಾಲದ ಅಗತ್ಯವೂ ಹೌದು.

ಗುಜರಾತಿ ಲೇಖಕ ದಿನಕರ್ ಜೋಶಿ ಬರೆದಿರುವ ಈ ಕಾದಂಬರಿಯನ್ನು ಶ್ರೀನಾಥ್ ಡಿ.ಎನ್. ಕನ್ನಡಕ್ಕೆ ತಂದಿದ್ದಾರೆ. ಮುಂದಿನ ವಾರದಿಂದ ಪ್ರಕಟವಾಗುವ ಈ ಧಾರಾವಾಹಿ, 'ಗಾಂಧಿ–150'ರ ಸಂದರ್ಭದಲ್ಲಿ ಓದುಗರ ಪರವಾಗಿ ಮಹಾತ್ಮನಿಗೆ 'ಸುಧಾ' ಸಲ್ಲಿಸುತ್ತಿರುವ ನಮನ.

ನಂಜಿ: ಲೇ ಎಲ್ಲೇ ಇದೀಯಾ?
ನಂಜಿ: ನಾನು ಮನೆಯ ವರಾಂಡಾ ಮತ್ತು ಅಡುಗೆ ಮನೆಯ ಮಧ್ಯದಲ್ಲಿನ ಹಾಲ್ ಬಳಿಯ ಬಾಗಿಲಿನ ಪಕ್ಕದಲ್ಲಿ ಇದ್ದೀನಿ.
ನಂಜ: ಲೇ ತಲೆಕೆಟ್ಟಿದೆಯಾ ನಿನಗೆ. ಮನೆಯಲ್ಲಿ ಇದ್ದೀನಿ ಅಂತ ಹೇಳೋದಕ್ಕೆ ಏನ್ ರೋಗ.
ನಂಜಿ: ತಲೆಕೆಟ್ಟಿರೋದು ನನಗಾ ನಿಮಗಾ. ಲ್ಯಾಂಡ್‌ಲೈನ್ ನಂಬರ್‌ಗೆ ಫೋನ್ ಮಾಡಿ ಎಲ್ಲಿದ್ದೀಯಾ ಅಂತ ಕೇಳ್ತಿದ್ದೀರಲ್ಲ.



ಗಂಡ: ಏನೇ ಈ ಶರ್ಟ್ ಒಗೆದಿದ್ದೀಯಾ?
ಹೆಂಡತಿ: 'ನೆಕ್ ನೋಡಿ' ಒಮ್ಮೆ ನೋಡಿ.
ಗಂಡ: ಏನಂದೆ ನಾನು ಶರ್ಟ್ ಅನ್ನ 'ನೆಕ್ ನೋಡ್ಬೇಕಾ'?
ಹೆಂಡತಿ: ಹಾಗಲ್ಲ ರೀ... ಆ ಶರ್ಟ್‌ನ ನೆಕ್ ಅಂದ್ರೆ ಕಾಲರ್ ನೋಡಿ ಅಂದೆ!

★★★

ಪತ್ನಿ: ಒಂದು ಕವನ ಹೇಳಿ ಪ್ಲೀಸ್.
ಪತಿ: ನಿನ್ನ ನೋಡಿದಾಗ ನಾ ನನ್ನ ಮರೆತೆ.
ಪತ್ನಿ: ವಾವ್...ವಾವ್... ಸೂಪರ್ ರೀ ಆಮೇಲೆ?
ಪತಿ: ನಿನ್ನ ತಂಗಿ ಪರಿಮಳಾನ ನೋಡಿದ ಮೇಲೆ ನಿನ್ನನ್ನೇ ಮರೆತೆ.

(ಸಂಗ್ರಹ) ವಿ. ಹೇಮಂತ ಕುಮಾರ, ಬೆಂಗಳೂರು


ಓಂ ✝ ☪ ಸರ್ವೇಜನಃ ಸುಖಿನೋ ಭವಂತುಃ ಓಂ ✝ ☪

ಸಮಸ್ಯೆ ನಿಮ್ಮದು ಪರಿಹಾರ ನಮ್ಮದು



ಶ್ರೀ ಸಾಯಿಬಾಬ ಉಪಾಸಕರು

ದಕ್ಷಿಣ ಭಾರತದಾದ್ಯಂತ ಜನಮನ್ನಣೆ ಪಡೆದಿರುವ ವಂಶಪಾರಂಪರಿಕ
ವಶೀಕರಣ ಮಾಂತ್ರಿಕರು
ಶ್ರೀಯುತ ಪರಶುರಾಮ್ ಗುರೂಜಿ

ಸ್ತ್ರೀ ಪುರುಷ ವಶೀಕರಣ, ಸತಿಪತಿ ಕಲಹ, ಡೈವೋರ್ಸ್ ಪ್ರಾಬ್ಲಮ್, ಸಾಲಬಾಧೆ, ಪ್ರೇಮವಿಚಾರ, ಸಂತಾನಫಲ, ವ್ಯಾಪಾರಾಭಿವೃದ್ಧಿ, ಜಮೀನು ವಿಚಾರ, ಕೋರ್ಟ್‌ಕೇಸ್, ಮಾಟಮಂತ್ರ, ಪ್ರೇತಬಾಧೆ ಇನ್ನಿತರ ನಿಮ್ಮ ಸಮಸ್ಯೆ ಏನೇ ಇರಲಿ ಎಷ್ಟೇ ಕಠಿಣವಾಗಿರಲಿ ಕೇರಳ ಮತ್ತು ಕೊಳ್ಳೇಗಾಲದ 16ನೇ ಶತಮಾನದ ಪ್ರಾಚೀನ ತಾಳೆಗ್ರಂಥದ ರಹಸ್ಯವಾದ ಮಹಾರುದ್ರಶೂಲ ಪ್ರಣವಶಕ್ತಿಯಿಂದ

ಕೇವಲ 5 ದಿನದಲ್ಲಿ
100% ಪರಿಹಾರ ಶತಸಿದ್ಧ

ನೀವು ಎಷ್ಟೋ ದೈವ, ದೇವಸ್ಥಾನ ಮತ್ತು ಜ್ಯೋತಿಷ್ಯರಲ್ಲಿ ಕೇಳಿ ಪರಿಹಾರ ಸಿಗದೆ ನೊಂದಿದ್ದರೆ ಶೀಘ್ರ ಪರಿಹಾರಕ್ಕಾಗಿ ಇವರನ್ನೊಮ್ಮೆ ಭೇಟಿಮಾಡಿ.

ಇಲ್ಲಿ ಹೇಳುವ ವಿಷಯವನ್ನು ಗುಪ್ತವಾಗಿಡಲಾಗುವುದು ಹಾಗೂ ಗುರೂಜಿಯವರಲ್ಲಿ ನಿಸ್ಸಂಕೋಚದಿಂದ ಮಾತನಾಡಲು ಕರೆಮಾಡಿ:

9620444460

ಖಾಯಂ ಮನೆ ವಿಳಾಸ: ಜೈಬಾಲಾಜಿ ಜ್ಯೋತಿಷ್ಯಂ
ಬನಶಂಕರಿ ದೇವಸ್ಥಾನದ ಹತ್ತಿರ, ಮುಖ್ಯಬಸ್‌ನಿಲ್ದಾಣದ ಪಕ್ಕದಲ್ಲಿ, ಬನಶಂಕರಿ ಬೆಂಗಳೂರು.

ವಿಶೇಷ ಸೂಚನೆ: ಈ ಪೇಪರ್ ಕಟ್ಟಿಂಗ್ ತಂದವರಿಗೆ ಮುಜರಾಯಿ ಇಲಾಖೆ ಮತ್ತು ಧಾರ್ಮಿಕ ದತ್ತಿ ಇಲಾಖೆ ಹಾಗೂ ಮಾಡಾಯಿಕಾವ್ ಭಗವತಿ ದೇವಸ್ಥಾನಂ (ತಳಿಪರಂ) ಕೇರಳ ವತಿಯಿಂದ ಉಚಿತ ಸೇವೆಗಳು ಮತ್ತು ಪರಿಹಾರಗಳು ಲಭ್ಯವಿದೆ.